ಈ) ಈ ಸಾಲಿನಲ್ಲಿ ಸಬ್ಸಿಡಿಯನ್ನು ಕಡಿತ ಗೊಳಿಸಲು ಕಾರಣವೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :

ಅ) ಹೌದು

ಆ) ಶೇಕಡಾ ೫೦ ರಷ್ಟು ಸಬ್ಸಿಡಿಯನ್ನು ನೀಡಲಾಗುತ್ತಿದೆ.

ಇ) ಶೇಕಡಾ ೫೦ರಷ್ಟು ಸಬ್ಸಿಡಿಯನ್ನು ನೀಡಲಾಗಿತ್ತು.

ಈ) ಪ್ರಸ್ತುತ ಸಾಲಿನಲ್ಲಿ ಸಬ್ಸಿಡಿಯನ್ನು ಕಡಿತಗೊಳಿಸಿಲ್ಲ.

೪೦೩೪ (೩೯೩೨) ಶ್ರೀ ಶಶಿಕಾಂತ್ ಅಕ್ಕಪ್ಪನಾಯಕ್ (ಹುಕ್ಕೇರಿ) :– ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಿಳಾ ಸ್ವ–ಸಹಾಯ ಸಂಘ ಗಳಿಂದ ತಯಾರಾದ ವಸ್ತುಗಳನ್ನು ಮಾರಾಟ ಮಾಡಲು ತಾಲ್ಲೂಕು ಮಟ್ಟದಲ್ಲಿಯೇ ಮಾರಾಟ ಕೇಂದ್ರಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಹಮ್ಮಿಕೊಂಡಿರುವ ಕಾರ್ಯಕ್ರಮವೇನು ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀಮತಿ ಭಾಗೀರಥಿ ಮರಳಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ತಾಲ್ಲೂಕು ಮಟ್ಟದ ಮಾರಾಟ ಭವನ ನಿರ್ಮಾಣ ನಿರ್ಮಾಣ ಕುರಿತಂತೆ ಪರಿಶೀಲನೆ ನಂತರ, ಅಗತ್ಯ ಅನುದಾನ ಒದಗಿಸಿಕೊಂಡ ನಂತರ, ಕ್ರಮ ಕೈಗೊಳ್ಳಲಾಗುವುದು.

ಆ) ಮೇಲಿನಂತೆ

೪೦೩೬ (೪೪೧೩) ಶ್ರೀ ಶಶಿಕಾಂತ್ ಅಕ್ಕಪ್ಪನಾಯಕ್ (ಹುಕ್ಕೇರಿ) :– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರು ಉಪಯೋಗಿಸುತ್ತಿರುವ ಯಾವ ಯಾವ ರಸಾಯನಿಕ ರಸ ಗೊಬ್ಬರಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಸಬ್ಸಿಡಿ ನೀಡಲಾಗುತ್ತಿದೆ;